# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ–ವಿಭಾಗದ ವಾರ್ಡ್ ಸಂಖ್ಯೆ–172 ಮಡಿವಾಳ ಕಛೇರಿಯಲ್ಲಿ ದಿನಾಂಕ: 16.01.2021 ರಂದು ನಡೆದ ವಾರ್ಡ್ ಸಮಿತಿ ಸಭೆ ನಡವಳಿಗಳು.

ಹಾಜರಿದ್ದ ಅಧಿಕಾರಿಗಳ ವಿವರಗಳು

1. ಶ್ರೀ. ಗಂಗಾಧರ್, ವಾರ್ಡ್–172 ನೋಡಲ್ ಅಧೀಕಾರಿ.
2. ಶ್ರೀ ಸಿದ್ಧಣ್ಣ.ವಿ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕಅಭಿಯಂತರರು ವಾರ್ಡ್–172 ಮಡಿವಾಳ
3. ಶ್ರೀ.ಮೊಹಮ್ಮದ್ ಹೈದರ್ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ 172
4. ಶ್ರೀ. ಮೌನೇಶ್ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ 172
5. ಶ್ರೀ. ಹರೀಶ್, ಎ.ಇ.(ಬಿಡಬ್ಲ್ಯೂ.ಎಸ್.ಎಸ್.ಬಿ)
6. ಶ್ರೀ.ಗಂಗಣ್ಣ, ಮದ್ದೂರಮ್ಮ ಕಾಲೋನಿ, ಸದಸ್ಯರು
7. ಶ್ರೀ. ಶ್ರೀನಿವಾಸ್‌ರೆಡ್ಡಿ, ವೆಂಕಟೇಶ್ವರ ಲೆಔಟ್, ಸದಸ್ಯರು
8. ಶ್ರೀ ಮಂಜುನಾಥ್, ಕ್ಯಾಷಿಯರ್ ಲೇಔಟ್ ಅಸೋಸಿಯೆಷನ್

* * * * * *

ದಿನಾಂಕ 16–01–2021 ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗಿರುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಹೊಸವರ್ಷದ ಶುಭಾಷಯಗಳೊಂದಿಗೆ ಸ್ವಾಗತವನ್ನು ಕೋರಿ ಕಳೆದ ವಾರ್ಡ್ ಸಮಿತಿ ಸಭೆಯ ವರದಿಯನ್ನು ಚಚಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನಿಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

1. ರಸ್ತೆ ಗುಂಡಿಗಳು.

ಕಳೆದ ಸಭೆಯಲ್ಲಿ ಚರ್ಚಿಸಲಾಗಿದ್ದ, ವಾರ್ಡ್ ಪರೀವಿಕ್ಷಣೆಯ ಸಮಯದಲ್ಲಿ ಮೇಲೆ ಪರಿವೀಕ್ಷಿಸಿದ ರಸ್ತೆಗಳಲ್ಲಿ ಅಲ್ಲಲ್ಲಿ ಗುಂಡಿಗಳು ಕಂಡುಬಂದಿರುತ್ತದೆ. ಸದರಿ ಗುಂಡಿಗಳನ್ನು ತ್ವರಿತಗತಿಯಲ್ಲಿ ಮುಚ್ಚಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕಾಗಿ ಹಾಜರಿದ್ದ ವಾರ್ಡ್‌ನ ಸಹಾಯಕ ಅಭಯಯಂತರರಿಗೆ ಸೂಚಿಸಲಾಗಿತ್ತು.

ಈ ಕುರಿತಂತೆ ಸಹಾಯಕ ಅಭಿಯಂತರರು ಮಾತನಾಡಿ ರಸ್ತೆ ಅಗೆತದ ಎಲ್ಲಾಗುಂಡಿಗಳು ಹಾಗೂ ಬಿಡಬ್ಲ್ಯೂ.ಎಸ್.ಎಸ್.ಬಿ/ ಇತರೆ ಇಲಾಖೆಯಿಂದು ಕೈಗೊಂಡ ಎಲ್ಲಾ ಗುಂಡಿ ಮತ್ತು ರಸ್ತೆ ಅಗೆತಗಳನ್ನು ಮುಚ್ಚಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

2. ಬಿದಿ ದೀಪಗಳ ನಿರ್ವಹಣೆ ಬಗ್ಗೆ.

ವಾರ್ಡ್ ವ್ಯಾಪ್ತಿಯ 18ನೇ ಮುಖ್ಯರಸ್ತೆ ಮತ್ತು 15ನೇ ಮುಖ್ಯರಸ್ತೆಯ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿರುವುದಿಲ್ಲ ಹಾಗೂ ಸಮರ್ಪಕವಾಗಿ ನಿರ್ವಹಣೆಯಾಗುತ್ತಿಲ್ಲವೆಂದು ಕೂಡಲೇ ಅಗತ್ಯ ಕ್ರಮ ಕೈಗೊಳ್ಳಲು ಅಲ್ಲಿನ ನಾಗರೀಕರು ದೂರಿರುತ್ತಾರೆ.

ಈ ಕುರಿತು ಸಂಬಂಧ ವಾರ್ಡ್ ಅಭಿಯಂತರರಿಗೆ ಸಂಬಂಧ ಪಟ್ಟ ಇಲಾಖೆಯಿಂದ ಅಗತ್ಯಕ್ರಮಗಳು ಜರುಗಿಸಲು ಸೂಚಿಸಲಾಯಿತು.

3. ಘನತ್ಯಾಜ್ಯ ನಿರ್ವಹಣೆ ಬಗ್ಗೆ.

ಕಳೆದ ಸಮಿತಿ ಸಭೆಯಲ್ಲಿ ಚರ್ಚಿಲಾಗಿದ್ದ, ವಾರ್ಡ್ ವ್ಯಾಪ್ತಿಯಲ್ಲಿ ಒಣ ಕಸ ಹಾಗೂ ಹಸಿಕಸವನ್ನು ಸಮರ್ಪಕವಾಗಿ ವ್ಯವಸ್ಥಿತ ಪದ್ದತಿಯನ್ನು ಅಳವಡಿಸಿ ಕಸಮುಕ್ತ ವಾರ್ಡ್‌ನ್ನು ನಿರ್ಮಾಣ ಮಾಡುವ ಸಲುವಾಗಿ ಸೂಕ್ತಕ್ರಮಗಳನ್ನು ಕೈಗೊಳ್ಳಲು ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚನೆಯನ್ನು ನೀಡಲಾಗಿತ್ತು ಮತ್ತು ವಾರ್ಡ್ ವ್ಯಾಪ್ತಿಯ ವೆಂಕಟೇಶ್ವರ ಬಡಾವಣೆಯ ಉದ್ಯಾನವದ ಸುತ್ತ ಮುತ್ತ ಕಸವನ್ನು ಬಿದ್ದಿದ್ದು ಸಮರ್ಪಕವಾಗಿ

ವಿಲೇವಾರಿಯಾಗುತ್ತಿರುವುದಿಲ್ಲ ಮತ್ತು ವಾರ್ಡ್‌ನ ಅನೇಕ ಮುಖ್ಯ ಹಾಗೂ ಇತರೆ ರಸ್ತೆಗಳಲ್ಲಿ ಸಮರ್ಪಕವಾ ಕಸವಿಲೇವಾರಿಯಾಗುತ್ತಿರುವುದಿಲ್ಲ ಹಾಗೂ ಅನೇಕ ಕಡೆ ತ್ಯಾಜ್ಯ ಹಾಗೂ ಅನುಪಯುಕ್ತ ಅವಶೇಷಗಳು ಹೆಚ್ಚಾಗಿ ಉತ್ಪತ್ತಿಯಾಗಿ ಅಲ್ಲಲ್ಲಿ ಎಸೆಯುವುದರ ಬಗ್ಗೆ ಮುಂಜಾಗ್ರತೆ ಕೈಗೊಂಡು ತ್ವರಿತಗತಿಯಲ್ಲಿ ಕಸವನ್ನು ವಿಲೇವಾರಿ ಮಾಡಲು ಸಭೆಗೆ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷರಿಗೆ ಅಗತ್ಯ ಕ್ರಮಗಳು ಕೈಗೊಳ್ಳಲು ಸೂಚಿಸಲಾಯಿತು.

ಈ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಮಾತನಾಡಿ, ವಾರ್ಡ್ ಪ್ರದೇಶದಲ್ಲಿ ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ ಮಾಡುತ್ತಿದ್ದ ಗುತ್ತಿಗೆದಾರ ಆಟೋ ಟಿಪ್ಪರ್‌ಗಳಿಗೆ ಧ್ವನಿವರ್ಧಕಗಳನ್ನು ಅಳವಡಿಸದೇ ಇರುವುದು ಕಂಡುಬಂದಿದ್ದು, ಇದೇ ಸಂದರ್ಭದಲ್ಲಿ ಆಟೋ ಟಿಪ್ಪರ್ ಚಾಲಕರು ಮತ್ತು ಸಹಾಯಕರಿಗೆ ಗ್ಲೌಸ್ ಮತ್ತು ಮಾಸ್ಕ್‌ಗಳನ್ನು ನೀಡದಿರುವುದು ಕಂಡುಬಂದಿರುವುದರಿಂದ ವಾರ್ಡ್ ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ಮೌನೇಶ್ ಆಚಾರ್ಯರವರಿಗೆ ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರಾದ ಮೇ॥ ನಿರ್ಮಲ್ ಎನ್ವಿರೋ ಸಾಲ್ಯುಷನ್ಸ್ ಪ್ರೈ.ಲಿ ರವರಿಗೆ ನೋಟೀಸ್‌ನ್ನು ಜಾರಿಮಾಡಿ ಅಗತ್ಯ ಕ್ರಮಗಳನ್ನು ಕೈಗೊಂಡು ಮುಂದಿನ ಸಭೆಯಲ್ಲಿ ವರದಿ ಸಲ್ಲಿಸಲು ಸೂಚಿಸಲಾಯಿತು.

4. ಬೀದಿ ವ್ಯಾಪಾರಿಗಳ ಬಗ್ಗೆ.

ಸಭೆಯಲ್ಲಿ ಹಾಜರಿದ್ದ ಶ್ರೀನಿವಾಸ್ ರವರು ಮಾತನಾಡಿ 20ನೇ ಮುಖ್ಯರಸ್ತೆಯಲ್ಲಿನ ಪಾದಚಾರಿ ಮಾರ್ಗದಲ್ಲಿ ಅನಧಿಕೃತವಾಗಿ ಮಳಿಗೆ ಅಂಗಡಿಗಳನ್ನು ಇಟ್ಟ ವ್ಯಾಪಾರ ಮಾಡುತ್ತೀರುವುದು ಕಂಡುಬಂದಿರುತ್ತದೆ. ಇದರಿಂದಾಗಿ ಅಲ್ಲಿನ ಸವಾರರಿಗೆ ಓಡಾಡಲು ಅನಾನುಕುಲವಾಗುತ್ತಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅದರಂತೆ, ದಿನಾಂಕ: 13.01.2021ರಂದು 20ನೇ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಅನಧಿಕೃತ ಮಳಿಗೆ ಅಂಗಡಿಗಳನ್ನು ತೆರವುಗೊಳಿಸಲಾಯಿತು ಹಾಗೂ ಅಲ್ಲಿನ ಅಂಗಡಿಗಳಿಗೆ ನೋಟೀಸ್‌ನ್ನು ಜಾರಿಮಾಡಿ ಮತ್ತೊಮ್ಮೆ ಈ ತರಹ ಪಾದಚಾರಿ ಮಾರ್ಗದಲ್ಲಿ ವ್ಯಾಪಾರಮಾಡದಂತೆ ಎಚ್ಚರಿಕೆ ನೀಡಲಾಯಿತು.

ಕೊನೆಯದಾಗಿ, ಅದ್ಯಕ್ಷರು ಮಾತನಾಡಿ ವಾರ್ಡ್‌ನ ಮಾರ್ಷಲ್‌ಳು ಇದುವರೇಗೂ ಮಾಸ್ಕ್ ದರಿಸದೇ ಇರುವರ ವಿರುದ್ಧ ಯಾವ ಯಾವ ಕ್ರಮಗಳ ಕೈಗೊಂಡ ಬಗ್ಗೆ ಹಾಗೂ ಇದುವರೆಗೂ ಮಾಸ್ಕ್‌ದರಿದವರಿಂದ ಎಷ್ಟು ದಂಡವಸೂಲಿ ಮಾಡಿರುವುದರಬಗ್ಗೆ ಮುಂದಿನ ಸಭೆಯೊಳಗಾಗಿ ಈ ವಿಷಯದ ಬಗ್ಗೆ ವರದಿ ಸಲ್ಲಿಸಲು ತಿಳಿಸುತ್ತಾ, ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಗಂಗಾಧರ್).
ನೋಡಾಲ್ ಅಧಿಕಾರಿ
ವಾರ್ಡ್–172 ಮಡಿವಾಳ

<u>ಪ್ರತಿಯನ್ನು:</u>

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ–ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ